ಸಂಬಂಧವೂ ಇರುವುದಿಲ್ಲ. ನಮ್ಮ ದೇಶದ ಕಲೆ ಅತ್ಯುತ್ತಮವಾದದ್ದು ಅನ್ನುವ ಹುಸಿ ಭ್ರಮೆಯಲ್ಲಿದ್ದೇವೆ. ಕ್ಯಾನ್‌ವಾಸ್, ಬಣ್ಣ, ಬ್ರಶ್ ಯಾವುದೂ ನಮ್ಮದಲ್ಲ. ವಿದೇಶದಿಂದ ತರಿಸಿಕೊಳ್ಳುವ ಪರಿಸ್ಥಿತಿಯಿದೆ. ನಾವು ಉದಾರಿಗಳಾಗಬೇಕು, ಸೂಕ್ಷ್ಮಜ್ಞರಾಗಬೇಕು, ಜಗತ್ತಿನ ಜನ ಬಂದು ನಮ್ಮ ಕಲೆಯನ್ನು ನೋಡುವಂತಾಗಬೇಕು. ಅವರು ಪ್ರಚಾರ ಮಾಡುತ್ತಾರೆ, ನಮಗೆ ಪ್ರಚಾರ ಮಾಡಲು ಬರುವುದಿಲ್ಲ ಅಂದರೆ ಏನರ್ಥ? ಹಾಗಾದರೆ ನಮ್ಮ ಹಿಂದುಸ್ತಾನಿ ಸಂಗೀತಗಾರರು ಹೇಗೆ ಜಗತ್ತಿನ ತುಂಬಾ ಪ್ರಖ್ಯಾತಿ ಪಡೆದರು? ಪಂಡಿತ್ ರವಿಶಂಕರ್, ಉಸ್ತಾದ್ ಅಲಿ ಅಕ್ಬರ್ ಖಾನ್‌ರನ್ನು ಕೇಳಲು ಜನ ಸಾಲುಗಟ್ಟಿ ನಿಲ್ಲುತ್ತಾರೆ. ಯಾಕೆಂದರೆ, ಅವರು ತಮ್ಮ ಕಲೆಯಲ್ಲಿ ಅಂಥ ಔನ್ನತ್ಯವನ್ನು ಸಾಧಿಸಿದರು. ಪ್ರಧಾನಮಂತ್ರಿ, ಮುಖ್ಯಮಂತ್ರಿ ಕಚೇರಿಗಳನ್ನು ಅಲೆದಾಡುತ್ತ ತಮ್ಮ ಕಲೆಯನ್ನು ಅವರು ನಾಶ ಮಾಡಿಕೊಳ್ಳಲಿಲ್ಲ. ನಾನು ಯಾವುದೇ ಒಂದು ಪಕ್ಷ ಹೀಗೆ ಮಾಡುತ್ತಿದೆ ಅಂತ ಹೇಳುತ್ತಿಲ್ಲ. ಯಾವ ಪಕ್ಷ ಅಧಿಕಾರಕ್ಕೆ ಬಂದರೂ ನಮ್ಮ ಕಲಾವಿದರ, ಲೇಖಕರ ಹಣೆಬರಹ ಇಷ್ಟೆ. ಅವರು ಕಲಾವಿದರಾಗಲಿ, ಲೇಖಕರಾಗಲಿ ಅಲ್ಲ. ಅವರು ದಲ್ಲಾಳಿಗಳು. ಇಂಥ ಮಾನಸಿಕತೆಯಿಂದ ನೀವು ಎಂಥ ಕಲೆಯನ್ನು ಅಪೇಕ್ಷಿಸಲು ಸಾಧ್ಯ? ಕಲಾವಿದರು ನಿಜವಾದ ಮನುಷ್ಯರಾಗಿದ್ದರೆ ಇವೆಲ್ಲ ಅವರಿಗೆ ಮುಖ್ಯವೇ ಅಲ್ಲ.

ಜೀವನವನ್ನು ಸಹಜಗೊಳಿಸುವ ಅಗತ್ಯ ಎಂದಿಗಿಂತಲೂ ಇಂದು ಹೆಚ್ಚಿದೆ. ನಾವು ಪೂಜಿಸುತ್ತೇವೆ ಇಲ್ಲವೆ ತುಳಿಯುತ್ತೇವೆ. ಅರಿಯಲು, ಯೋಚಿಸಲು ಮಾತ್ರ ಕಲಿಯುವುದಿಲ್ಲ. ಒಬ್ಬ ಮನುಷ್ಯ ಇನ್ನೊಬ್ಬ ಮನುಷ್ಯನೊಂದಿಗೆ ಸಂವಾದ ಮಾಡುವುದು ಮುಖ್ಯ. ಪ್ರೀತಿ ವಿಶ್ವಾಸದಿಂದ ಸಂವಾದ ಮಾಡುವುದು ಮುಖ್ಯ. ಇಂಥ ವಾತಾವರಣ ಇದೆಯೆ? ನಾವು ಪ್ರಾದೇಶಿಕತೆಯ ಕಲ್ಪನೆಯನ್ನು ಎಲ್ಲಿಗೆ ಒಯ್ದು ಮುಟ್ಟಿಸಿದ್ದೇವೆ. ಪ್ರಾದೇಶಿಕತೆ ಎಂದರೆ ಮನುಷ್ಯರ ನಡುವಿನ ಗೋಡೆಯಾಗಿಸಿಬಿಟ್ಟಿರುವೆವು.

**◆ ನೀವು ಎಲ್ಲೆಲ್ಲಿ ಮನುಷ್ಯರ ಯಾತನೆ ಇದೆಯೊ, ಸಂಘರ್ಷ ಇದೆಯೊ ಅದನ್ನು ನಿಮ್ಮ ಚಿತ್ರಗಳಲ್ಲಿ ತರಲು ಹೆಚ್ಚು ಪ್ರಯತ್ನಿಸಿದ್ದೀರಿ. ನಿಮ್ಮ ಬರಹದಲ್ಲೂ ಜಗತ್ತಿನ ಅಂಥಾ ಕಲಾಕೃತಿಗಳನ್ನು ವಿಶ್ಲೇಷಣೆಗೊಳಪಡಿಸಿದ್ದೀರಿ. ಪೊಟ್ಯಾಟೊ ಈಟರ್ಸ್ (ವಿನ್ಸೆಂಟ್ ವ್ಯಾನ್‌ಗೊ), ಬಂದ್ ಬೈಠಕ್ (ಸೋಮನಾಥ ಹೋರ್), ರೈಲ್ವೆಯ ಮೂರನೆ ದರ್ಜೆಯ ಪ್ರಯಾಣಿಕರು (ಹೆನ್ರಿ ದೊಮಿಯರ್) – ಇಂಥ ಕಲಾಕೃತಿಗಳನ್ನು ಸೂಕ್ಷ್ಮವಾದ ವಿಮರ್ಶೆಗೊಳಪಡಿಸಿದ್ದೀರಿ. ಮನುಷ್ಯರ ಈ ದುಃಖಗಳಿಗೂ, ನೋವಿಗೂ, ಕಲೆಗೂ ಯಾವ ಸಂಬಂಧ ಹುಡುಕುತ್ತಿದ್ದೀರಿ?**

ಯಾರಿಗೆ ಮನುಷ್ಯನ ಯಾತನೆಯ ಅರಿವಾಗುವುದಿಲ್ಲವೋ ಅವರಿಗೆ ಕಲೆಯ ಸೌಂದರ್ಯವೂ ಅರಿವಾಗುವುದಿಲ್ಲ. ಯಾವುದೇ ಕಲೆ ಅಂತಿಮವಾಗಿ ಮನುಷ್ಯತ್ವದ ಮಾತನ್ನೇ ಆಡುತ್ತದೆ. ಮನುಷ್ಯರ, ನಿಸರ್ಗದ ಸುಖದುಃಖಗಳ ಮಾತನ್ನೇ ಆಡುತ್ತಿರುತ್ತದೆ. ಈಗ ಜೈನುಲ್ ಆಬೇದಿನ್ ಅವರ ಚಿತ್ರ ಗಮನಿಸಿ. ಅದು ಬರಗಾಲದ ಒಂದು ಚಿತ್ರ. ಅಲ್ಲಿ ಹೆಣ್ಣುಮಗಳೊಬ್ಬಳು ಹಸಿವಿನಿಂದ ನರಳುತ್ತಿದ್ದಾಳೆ. ಅದು ಯಾವ ಕಾಲದ ಚಿತ್ರ ಎನ್ನುವುದು ನಿಮಗೆ ಗೊತ್ತಿಲ್ಲದಿದ್ದರೂ ನಿಮಗೆ ಒಂದು ಕ್ಷಣ ಅನಿಸಿಬಿಡುತ್ತದೆ – ಛೆ! ಇದೆಲ್ಲಾ ಆಗಬಾರದಿತ್ತು, ಈ ಹಸಿವು ತಪ್ಪು ಅಂತ. ಇದೆಲ್ಲವನ್ನು ನೋಡುವುದರಿಂದ ನಿಮ್ಮ ಮನಸ್ಸು ಸಂಕಟಪಡುತ್ತದೆ. ನಿಮ್ಮ ಮನಸ್ಸಿನಲ್ಲಿ ಒಂದು ಪ್ರತಿರೋಧವೂ ಉಂಟಾಗುತ್ತದೆ. ನೀವು ಅದನ್ನು ಹೊರಗೆ ತೋರಿಸುತ್ತೀರೋ ಇಲ್ಲವೋ ಅದು ಎರಡನೇ ಹಂತದ ಮಾತು. ಆದರೆ ನಿಮ್ಮ ಮನಸ್ಸು ಯಾತನೆಪಡುತ್ತದೆ. ಈ ಚಿತ್ರ ಯಾರದೆಂದು ನಮಗೆ ಗೊತ್ತೂ ಇರುವುದಿಲ್ಲ. ಬರಗಾಲ, ಪ್ಲೇಗ್‌ದಂತಹ ಮಹಾಮಾರಿ, ಪ್ರವಾಹಪೀಡಿತ ಪ್ರದೇಶಗಳು, ಬಡತನದ ಚಿತ್ರಗಳು ಇವು ನಮ್ಮನ್ನು ಒಳಗಿನಿಂದ ಕಾಡುತ್ತವೆ. ಅದು ಯಾರಾದರೂ ತೆಗೆದಿರಲಿ, ಆದರೆ ಮನುಷ್ಯ ಜನಾಂಗದಲ್ಲಿ ಇಂಥದ್ದು ಸಂಭವಿಸಬಾರದು ಅಂತ ಮನಸ್ಸು ನುಡಿಯುತ್ತದೆ. ಯಾಕೆಂದರೆ ಆ ಚಿತ್ರಗಳು ನಮ್ಮ ಕರುಣೆಯನ್ನು ಉದ್ದೀಪಿಸುತ್ತವೆ. ಇದರರ್ಥ, ಎಲ್ಲ ಚಿತ್ರಗಳೂ ಕರುಣೆಯನ್ನೇ ಹುಟ್ಟುಹಾಕಬೇಕೆಂದು ನಾನು ಹೇಳುತ್ತಿಲ್ಲ. ಈಗ ನಾವು ಮೂರನೆಯ ದರ್ಜೆಯ ಪ್ರಯಾಣಿಕರ ಚಿತ್ರವನ್ನು ನೋಡುತ್ತೇವೆ. ನಮಗೆ ಅನಿಸುವುದೇನೆಂದರೆ ಇದಕ್ಕಿಂತ ಒಳ್ಳೆಯ ಪ್ರಯಾಣದ ಸೌಲಭ್ಯಗಳಿವೆ. ಅದು ಎಲ್ಲರಿಗೂ ಸಿಗಬೇಕು. ಈ